ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	186
ಸದಸ್ಯರ ಹೆಸರು	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತ)
ಉತ್ತರಿಸಬೇಕಾದ ದಿನಾಂಕ	03-03-2020
ಉತ್ತರಿಸುವ ಸಚಿವರು	ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ಮಾರ್ಚ್, 2018ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಸಿಎಜಿ ವರದಿಯಲ್ಲಿ ಅಕ್ರಮ ಗಣಿಗಾರಿಕೆಯಿಂದ ನಕಲಿ ದಾಖಲೆ ಸೃಷ್ಟಿಸಿ ಗಣಿಗಾರಿಕೆ ಮಾಡುತ್ತಿರುವುದರಿಂದ ಹಾಗೂ ವ್ಯಾಪ್ತಿ ಮೀರಿದ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ರೂ.191.93 ಕೋಟಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲ್ಲುಗಣಿ ಗುತ್ತಿಗೆದಾರರು ತಮಗೆ ಮಂಜೂರಾದ ಗುತ್ತಿಗೆ ಪ್ರದೇಶದಿಂದ ಹೊರಗಡೆ ಅಥವಾ ಗುತ್ತಿಗೆ ಅವಧಿ ಮುಗಿದ ಪ್ರಕರಣಗಳಲ್ಲಿ ತೆಗೆಯಲಾದ ಖನಿಜದ ಪ್ರಮಾಣವಾಗಿದ್ದು ಯಾವುದೇ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣಗಳಾಗಿರುವುದಿಲ್ಲ.
(ಆ)	ಈ ಅಕ್ರಮ ಗಣಿಗಾರಿಕೆ, ನಕಲಿ ದಾಖಲೆ ಸೃಷ್ಟಿಸಿ ಗಣಿಗಾರಿಕೆ ಹಾಗೂ ವ್ಯಾಪ್ತಿ ಮೀರಿದ ಗಣಿಗಾರಿಕೆ ಮಾಡುತ್ತಿರುವ ಬಗ್ಗೆ ಸಂಬಂಧಿತ ಅಧಿಕಾರಿಗಳಿಗೆ ತಿಳಿದಿರಲಿಲ್ಲವೇ; ಇಲ್ಲವೆಂದಾದಲ್ಲಿ ಅಂತಹ ಅಧಿಕಾರಿಗಳು ಕರ್ತವ್ಯ ಲೋಪವೆಸಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.	ಕಲ್ಲುಗಣಿ ಗುತ್ತಿಗೆದಾರರು ತಮಗೆ ಮಂಜೂರಾದ ಗುತ್ತಿಗೆ ಪ್ರದೇಶದಿಂದ ಹೊರಗಡೆ ಅಥವಾ ಗುತ್ತಿಗೆ ಅವಧಿ ಮುಗಿದ ಪ್ರಕರಣಗಳಲ್ಲಿ ತೆಗೆಯಲಾದ ಖನಿಜದ ಪ್ರಮಾಣವಾಗಿದ್ದು ಯಾವುದೇ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣಗಳಾಗಿರುವುದಿಲ್ಲ. ಸಿ.ಎ.ಜಿ ವರದಿಯಲ್ಲಿ ಪ್ರಸ್ತಾಪಿಸಿರುವ ಗುತ್ತಿಗೆಗಳು ದಕ್ಷಿಣ ಕನ್ನಡ, ವಿಜಯಪುರ, ಬೆಳಗಾವಿ, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದವಾಗಿರುತ್ತವೆ. ವಿವರ ಈ ಕೆಳಕಂಡಂತಿವೆ.

ಸಿಎಜಿ ವರದಿಯಲ್ಲಿ ಉಲ್ಲೇಖಿತವಾಗಿರುವ ಪ್ರಕರಣಗಳು

ಕ್ರ ಸಂ	ಜಿಲ್ಲೆ	ಅವಧಿ ಮುಗಿದಗಣಿಗುತ್ತಿಗೆಗಳಿಂದತೆಗೆಯಲಾದಉಪಖನಿಜ	ಗುತ್ತಿಗೆ ಪ್ರದೇಶದಿಂದ ಹೊರಗಡೆ ತೆಗೆಯಲಾದ ಉಪ ಖನಿಜ
1	ದಕ್ಷಿಣಕನ್ನಡ	4	3
2	ವಿಜಯಪುರ	5	3
3	ಬೆಳಗಾವಿ	9	5
4	ಬೆಂಗಳೂರು ಗ್ರಾಮಾಂತರ	16	6
5	ಚಾಮರಾಜನಗರ	18	16

ಸದರಿ ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಕರಣಗಳಿಗೆ ಸಂಬಂಧಿಸಿದ ಜಿಲ್ಲೆಯ ಅಧಿಕಾರಿಗಳು ದಂಡ ವಸೂಲಾತಿಗೆ ಕ್ರಮವಹಿಸಿ ಇದುವರೆಗೆ ರೂ. 5.51 ಕೋಟಿ ರಾಜಧನ ಮತ್ತು ದಂಡವನ್ನು ವಸೂಲಿ

		ಮಾಡಿರುತ್ತಾರೆ. ಅಲ್ಲದೇ, ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲು ಮಾಡಲಾಗಿದೆ ಮತ್ತು ಪ್ರಸ್ತಾಪಿತ ಪ್ರಕರಣಗಳಲ್ಲಿ ಅನಧಿಕೃತ ಗಣಿಗಾರಿಕಗೆ ನಡೆಸುತ್ತಿದ್ದವರಿಗೆ ನಿಯಮಾನುಸಾರ ನೋಟೀಸ್ ್ನು ಸಹ ಜಾರಿ ಮಾಡಿರುತ್ತಾರೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದ ಜಿಲ್ಲೆಯ ಅಧಿಕಾರಿಗಳಿಂದ ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿರುತ್ತದೆ. • ದಕ್ಷಿಣಕನ್ನಡಜಿಲ್ಲೆ, ವಿಜಯಪುರ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಾಮರಾಜನರ ಮತ್ತು ಹಾಸನ ಜಿಲ್ಲೆಗಳ ಒಟ್ಟು 85 ಪ್ರಕರಣಗಳಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಸುತ್ತಿದ್ದವರಿಗೆ ನೋಟೀಸ್‌ನ್ನು ಜಾರಿ ಮಾಡಲಾಗಿದೆ. • ಸದರಿ 85 ಪ್ರಕರಣಗಳಲ್ಲಿ ಪ್ರಸ್ತುತದವರೆಗೆ ಒಟ್ಟು ರೂ.5.51 ಕೋಟಿ ಮೊತ್ತದ ರಾಜಧನ ಮತ್ತು ದಂಡವನ್ನು ವಸೂಲಿ ಮಾಡಲಾಗಿರುತ್ತದೆ. • ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೂರು ಪ್ರಕರಣಗಳಲ್ಲಿ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.
(ಇ)	ಅಕ್ರಮವೆಸಗಲು ಸಹಾಯ ಮಾಡಿದ ಎಷ್ಟು ಅಧಿಕಾರಿಗಳನ್ನುಅಮಾನತ್ತು ಮಾಡಲಾಗಿದೆ?	ಸಿಎಜಿ ವರದಿಯಲ್ಲಿ ಉಲ್ಲೇಖಿಸಿರುವ ವಿಷಯದ ಕುರಿತು ಸಂಬಂಧಿಸಿದ ಜಿಲ್ಲೆಗಳ ಅಧಿಕಾರಿಗಳು ಬಾಕಿ ವಸೂಲಾತಿಗೆ ಕ್ರಮವಹಿಸಿರುವುದರಿಂದ ಇದುವರೆವಿಗೂ ಯಾವುದೇ ಅಧಿಕಾರಿಗಳನ್ನು ಅಮಾನತು ಮಾಡಿರುವುದಿಲ್ಲ.

ಸಿಐ 44 ಎಂಜಿಎಸ್ 2020

(ಸಿ.ಸಿ. ಪಾಟೀಲ್)
ಗಣಿ ಮತ್ತು ಭೂವಿಜ್ಞಾನ ಸಚಿವರು